**ಸಿ.ಸಿ. ನಂ. 347/2014** **ಪಿ.ಡಬ್ಲ್ಯೂ-3**

**ಸಾಕ್ಷಿಗೆ ದಿನಾಂಕ 6.11.2024 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿನಾಂಕ 13.8.2003ರ ಆಡಳಿತ ಮಂಡಳಿಯ ನಿರ್ಣಯವನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಸಿ.ಸಿ ನಂ.346/2014 ರಲ್ಲಿ ನಿಪಿ3 ಎಂದು ಗುರುತಿಸಲಾಗಿರುತ್ತದೆ. 2004-05 ನೇ ಸಾಲಿಗೆ ಸಂಬಂಧಪಟ್ಟಂತೆ ದಾಸ್ತಾನು ಮಾಡಿರುವ ಗೊಂದು, ಮರದ ಪಾಚಿ ಮತ್ತು ಜೇನನ್ನು ಮಾರಾಟ ಮಾಡುವ ಬಗ್ಗೆ ದಿನಾಂಕ 29.3.2004 ರಂದು ನಿರ್ಣಯ ಮಾಡಲಾಗಿರುತ್ತದೆ. ಸದರಿ ನಿರ್ಣಯದಲ್ಲಿ ನಾನು ಹಾಜರಿದ್ದು ಸಭಾ ನಡಾವಳಿಯಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿದಾರರು ಸದರಿ ಸಭಾ ನಡಾವಳಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ3 ಎಂದು, ಸಾಕ್ಷಿಯ ಸಹಿಯನ್ನು ನಿಪಿ3 ಎ ಎಂದು ಗುರುತಿಸಲಾಯಿತು. ಘಟನೆಯ ವಿಚಾರವಾಗಿ ಪೋಲಿಸರಿಗೆ ನಾನು ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಎಪಿಪಿಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದರಿಂದ ಅನುಮತಿಯನ್ನು ನೀಡಲಾಯಿತು.)

**ಪಾಟೀಸವಾಲುಃಎಪಿಪಿ ರವರಿಂದಃ**

ಆರೋಪಿಯನ್ನು ಹಣವನ್ನು ದುರುಪಯೋಗಪಡಿಸಿಕೊಂಡಿರುವ ನಾನು ಪೋಲಿಸರಿಗೆ ಹೇಳಿಕೆ ನೀಡಿ ಆ ವಿಚಾರವಾಗಿ ಈ ದಿನ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಿರುತ್ತೇನೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಎ.ಟಿ.ಕೆ ವಕೀಲರಿಂದಃ**

ನಿಪಿ3 ರಲ್ಲಿ ಮರದ ಪಾಚಿ, ಗೊಂದು ಹಾಗೂ ಜೇನನ್ನು ಮಾರಾಟ ಮಾಡುವ ಬಗ್ಗೆ ಮಾತ್ರ ನಿರ್ಣಯವಾಗಿರುತ್ತದೆ ಎಂದರೆ ಸರಿ. ಈ ಕೇಸು ದಾಖಲಾದ ನಂತರ ಪೋಲಿಸರು ನನ್ನನ್ನು ವಿಚಾರಣೆ ಮಾಡಿರುವುದಿಲ್ಲ. ನಿಪಿ3 ರಲ್ಲಿ ಆರೋಪಿತರು ಸದರಿ ಸಮಯದಲ್ಲಿ ಸಂಘದ ಕಾರ್ಯದರ್ಶಿಯಾಗಿರುವ ಬಗ್ಗೆ ನಮೂದಾಗಿರುವುದಿಲ್ಲ. ನಮ್ಮ ಸೊಸೈಟಿಯಲ್ಲಿ ಸಂಗ್ರಹ ಮಾಡಿದ್ದೇವೆ ಎಂದು ಹೇಳುವ ಜೇನು, ಪಾಚಿ ಮತ್ತು ಗೊಂದು ದಿನಗಳೆದಂತೆ ತೂಕ ಕಡಿಮೆಯಾಗುತ್ತದೆ ಎಂದರೆ ಸಾಕ್ಷಿದಾರರು ಪಾಚಿ 50 ರಿಂದ 100 ಗ್ರಾಂ ಕಡಿಮೆಯಾಗಬಹುದು ಎನ್ನುವರು. ಜೇನು, ಪಾಚಿ ಮತ್ತು ಗೋಂದನ್ನು ತುಂಬಾ ದಿನ ಸಂಗ್ರಹಿಸಿಟ್ಟಾಗ ಅದು ಹಾಳಾಗುವ ಸಾಧ್ಯತೆ ಇದ್ದಾಗ ಅದನ್ನು ಕಡಿಮೆ ಬೆಲೆಗೆ ಮಾರಾಟ ಮಾಡಲು ನಮ್ಮ ಸಂಘದಲ್ಲಿ ಕೆಲವೊಮ್ಮೆ ನಿರ್ಣಯ ಮಾಡಲಾಗಿರುತ್ತದೆ ಎಂದರೆ ಸರಿ. ದಿನಾಂಕ 29.3.2004ರ ನಡಾವಳಿಯಾದಾಗ ನಿರ್ದೇಶಕರಾಗಿದ್ದ ಸಣ್ಣಕರಿಯಯ್ಯ ಸದರಿ ದಿನ ಹಾಜರಿದ್ದರು. ಸದರಿ ಸಣ್ಣಕರಿಯಯ್ಯ ರವರು ನಡಾವಳಿಗೆ ಸಹಿ

ಮಾಡಿರುವುದಿಲ್ಲ ಎಂದರೆ ಸಾಕ್ಷಿದಾರರು ಸಹಿ ಮಾಡುವುದು ಅವರ ಜವಾಬ್ದಾರಿ ಎನ್ನುವರು. ನಿಪಿ3 ರಂತೆ ಯಾವುದೇ ನಡಾವಳಿಯನ್ನು ಮಾಡಿರುವುದಿಲ್ಲ, ಅದನ್ನು ಈ ಕೇಸಿಗೋಸ್ಕರ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನಮ್ಮ ಸಂಘದವರು ಆರೋಪಿತರ ವಿರುದ್ಧ ಸುಳ್ಳು ಕೇಸನ್ನು ದಾಖಲಿಸಿದ್ದು, ನಾನು ಈ ಹಿಂದೆ ಸಂಘದ ನಿರ್ದೇಶಕನಾಗಿದ್ದರಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ